# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: M/s JSW Renew Energy Limited ರವರಿಗೆ ದಾವಣಗೆರೆ ಜಿಲ್ಲೆಯ, ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 16 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

**ಓದಲಾಗಿದೆ**: 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/JSWREL-16 MW (SSEPL)/Jagalur/Davanagere/F-2009/2021/624, ದಿನಾಂಕ:04.02.2021

2) ಸರ್ಕಾರದ ದಿನಾಂಕ:10.02.2021 ರ ಹಂಚಿಕೆ ಸಮಿತಿ ಸಭೆ.

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s JSW Renew Energy Limited ರವರು ದಾವಣಗೆರೆ ಜಿಲ್ಲೆಯ, ಜಗಳೂರು ತಾಲ್ಲೂಕಿನ ಕೆಲಗೋಟೆ, ಕೆಂಚೇನಹಳ್ಳಿ, ಚಿಕ್ಕಬನ್ನಿಹಟ್ಟಿ, ಗೊಲ್ಲರಹಟ್ಟಿ, ಹೊಸಕೆರೆ, ಹಿರೆಬನ್ನಿಹಟ್ಟಿ, ಲಕ್ಕಂಪುರ ಮತ್ತು ಗೌರಿಪುರ ಗ್ರಾಮಗಳಲ್ಲಿ 16 ಮೆ.ವ್ಯಾ: ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ಘಟಕಕ್ಕೆ ಹಂಚಿಕೆ ನೀಡುವಂತೆ ಕೋರಿ ಹಂಚಿಕೆ ಸಮಿತಿ ಸಭೆಯಲ್ಲಿ ಮಂಡಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರ ಹಂಚಿಕೆ ಸಮಿತಿ ಸಭೆಯಲ್ಲಿ M/s JSW Renew Energy Limited ರವರು ದಾವಣಗೆರೆ ಜಿಲ್ಲೆಯ, ಜಗಳೂರು ತಾಲ್ಲೂಕಿನ ಕೆಲಗೋಟೆ, ಕೆಂಚೇನಹಳ್ಳಿ, ಚಿಕ್ಕಬನ್ನಿಹಟ್ಟಿ, ಗೊಲ್ಲರಹಟ್ಟಿ, ಹೊಸಕೆರೆ, ಹಿರೆಬನ್ನಿಹಟ್ಟಿ, ಲಕ್ಕಂಪುರ ಮತ್ತು ಗೌರಿಪುರ ಗ್ರಾಮಗಳಲ್ಲಿ ISTS ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 16 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ನೀಡುವ ಪ್ರಸ್ತಾವನೆಯನ್ನು ಸಮಿತಿಯು ಪರಿಶೀಲಿಸಿ, ಸದರಿ ಸ್ಥಳವು ಈಗಾಗಲೇ M/s Sreesannidhi Energy Private Limited ರವರಿಗೆ ದಿನಾಂಕ:05.11.2019ರಂದು ನಡೆದ ಹಂಚಿಕೆ ಸಮಿತಿ ಸಭೆಯಲ್ಲಿ ತಾತ್ವಿಕ ಅನುಮೋದನೆ ನೀಡಲು ಶಿಫಾರಸ್ಸುಗೊಂಡಿರುತ್ತದೆ. ಆದರೆ, ಸದರಿ ಕಂಪನಿಯವರು, ತಾತ್ವಿಕ ಅನುಮೋದನೆಗೆ ಶಿಫಾರಸ್ಸುಗೊಂಡಿರುವ ಪ್ರಸ್ತಾವನೆಯನ್ನು ಕಾರಣಾಂತರಗಳಿಂದ ಹಿಂಪಡೆಯುತ್ತಿರುವುದಾಗಿ ತಿಳಿಸಿದ ಹಿನ್ನಲೆಯಲ್ಲಿ, ಸದರಿ ಪ್ರಸ್ತಾವನೆಯ ಶಿಫಾರಸ್ಸನ್ನು ಹಿಂಪಡೆಯಲು ಮತ್ತು ಕಡತವನ್ನು ಹಿಂದಿರುಗಿಸಲು ಸರ್ಕಾರಕ್ಕೆ ಕೋರಲಾಗಿ, ಸರ್ಕಾರದಿಂದ ದಿನಾಂಕ:22.04.2021ರ ಪತ್ರದನ್ವಯ ಸದರಿ 16 ಮೆ.ವ್ಯಾ ಸಾಮರ್ಥ್ಯದ ತಾತ್ವಿಕ ಅನುಮೋದನೆ ಪ್ರಸ್ತಾವನೆಯನ್ನು ವಾಪಸ್ಸು ಮಾಡಲಾಗಿರುವ ಸ್ಥಳದ ಮೇಲೆ ಬರುತ್ತದೆ. ಆದುದರಿಂದ, ಸದರಿ ಸ್ಥಳವು ಹಂಚಿಕೆಗೆ ಲಭ್ಯವಿರುತ್ತದೆ.

M/s JSW Renew Energy Limited ರವರು ಯೋಜನಾ ಸ್ಥಳದ ಮತ್ತು ಅಳವಡಿಸುವ ವಿಂಡ್ ಟರ್ಬೈನ್‌ಗಳ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿರುತ್ತಾರೆ. ಸದರಿಯವರು 2000 ಕಿ.ವ್ಯಾ.ನ 8 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಸದರಿಯವರು ಅಳವಡಿಸುವ ಪ್ರತಿ ವಿಂಡ್ ಟರ್ಬೈನ್‌ನ footprint ಜಾಗಕ್ಕೆ 4 ಎಕರೆಗಳಂತೆ ಒಟ್ಟು 32 ಎಕರೆ ಜಮೀನನ್ನು ನೀಡಬಹುದಾಗಿರುತ್ತದೆ. ಆದಕಾರಣ ಯೋಜನೆಗೆ ಅಭಿವೃದ್ಧಿದಾರರು ಸಲ್ಲಿಸಿರುವ ಯೋಜನಾ ವಿಸ್ತೀರ್ಣದಲ್ಲಿ 32 ಎಕರೆ ಜಮೀನನ್ನು ಪರಿಗಣಿಸಿ ISTS ವರ್ಗದಡಿಯಲ್ಲಿ ಹಂಚಿಕೆ ಮಾಡಬಹುದಾಗಿದೆ. ಯೋಜನೆಗೆ ಬೇಕಾಗುವ ಜಮೀನನ್ನು ಪಡೆಯುವುದು ಮತ್ತು PGCIL ನಿಂದ Evacuation ನಿರಾಕ್ಷೇಪಣಾ ಪತ್ರ ಮತ್ತು LTA approval

...2

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 81 ಎನ್‌ಸಿಇ 2021**
**ಬೆಂಗಳೂರು, ದಿನಾಂಕ:15/07/2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s JSW Renew Energy Limited ರವರಿಗೆ ದಾವಣಗೆರೆ ಜಿಲ್ಲೆಯ, ಜಗಳೂರು ತಾಲ್ಲೂಕಿನ ಕೆಲಗೋಟೆ, ಕೆಂಚೇನಹಳ್ಳಿ, ಚಿಕ್ಕಬನ್ನಿಹಟ್ಟಿ, ಗೊಲ್ಲರಹಟ್ಟಿ, ಹೊಸಕೆರೆ, ಹಿರೆಬನ್ನಿಹಟ್ಟಿ, ಲಕ್ಕಂಪುರ ಮತ್ತು ಗೌರಿಪುರ ಗ್ರಾಮಗಳಲ್ಲಿ 16 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಷರತ್ತು ಹಾಗೂ ಶೆಡ್ಯೂಲ್‌ನಲ್ಲಿರುವಂತೆ ಹಂಚಿಕೆ ಮಾಡಿ ಆದೇಶಿಸಿದೆ.

**Geographical area description for 16 MW capacity wind power project of M/s JSW Renew Energy Limited**

| Sl. No | Toposheet No. | Proposed Capacity in MW | Nearby villages of the proposed area, taluk and district | Geographical area description of the project |
|---|---|---|---|---|
| 1 | 57 B/6 | 16 MW (8 Nos x 2000kW) | Kelagote, Kenchanahalli, Chikka Bannihatti, Gollarahatti, Hosakere, Hire Bannihatti, Lakkampur and Gauripur Villages of Jagalur Taluk, Davanagere district | The proposed area is surrounded by the points A-B-C-D-E-F-G-H-I-A and are held in the following Geographical co-ordinates as:<br>Point A:Lat:14°33'0.7"N, Long:76°16'41.9"E<br>Point B:Lat:14°33'30.1"N, Long:76°16'57"E<br>Point C:Lat:14°37'19.2"N,Long: 76°16'1.2"E<br>Point D:Lat: 14°40'00"N, Long: 76°18'42"E<br>Point E:Lat:14°37'47.6"N, Long:76°20'31.6"E<br>Point F:Lat:14°36'36"N, Long:76°19'42.2"E<br>Point G:Lat:14°36'33.8"N, Long:76°18'7.6"E<br>Point H:Lat:14°35'29.8"N,Long:76°17'39.8"E<br>Point I:Lat:14°32'56"N, Long:76°20'8.2"E<br>Peaks:722, 659, 643, 632, 631, 659 and 653m AMSL |
| | **Total** | **16 MW** | | |

…4

ಈ ಆದೇಶವನ್ನು ರದ್ದು ಮಾಡುವ/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

N. mangalagowri 15/7/21
(ಎನ್.ಮಂಗಳಗೌರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.
15/7/21

**ಇವರಿಗೆ:**

1. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ/ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ/ ಕಂದಾಯ ಇಲಾಖೆ/ಬಹುಮಹಡಿ ಕಟ್ಟಡ/ವಿಕಾಸಸೌಧ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
5. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
6. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.
7. ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ.
8. ಉಪ ಅರಣ್ಯ ಸಂರಕ್ಷಣಾಧಿಕಾರಿ, ದಾವಣಗೆರೆ ಜಿಲ್ಲೆ, ದಾವಣಗೆರೆ.
9. M/s JSW ReNew Energy Limited, JSW Centre, Bandra Kurla Complex, Bandra (East), Mumbai-400051.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
11. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
12. ಶಾಖಾ ರಕ್ಷಾ ಕಡತ/ಕಛೇರಿ ಪ್ರತಿ/ ಹೆಚ್ಚುವರಿ ಪ್ರತಿಗಳು.